ದೊರಕಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ. . .

ಶ್ರೀ ಎಸ್. ಸುರೇಶ್‌ಕುಮಾರ್ : ಎರಡೇ ಇರುವುದು. ನಾನು explain ಮಾಡುತ್ತೇನೆ. ಇದು ಮುಗಿದೇ ಹೋಗಿ ಬಿಡುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, You are capable of explaining. You have got all the capacity. The question is, ನಾವು ಚರ್ಚೆ ಮಾಡುವುದಕ್ಕೆ ನಮಗೆ ಇಲ್ಲಿ ಸಮಯ ಇಲ್ಲ. ಹಾಗಾದರೆ ಇನ್ನೆರಡು ದಿನ ಸದನ ಮುಂದಕ್ಕೆ ಹಾಕಿ. ಬಿಲ್ಲುಗಳನ್ನೆಲ್ಲಾ ಮೊದಲೇ ತೆಗೆದು ಕೊಳ್ಳೋಣ ಆ ಮೇಲೆ ಚರ್ಚೆ ಮಾಡೋಣ. ಸೋಮವಾರ ತೆಗೆದುಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್ : 10 ನಿಮಿಷದಲ್ಲಿ ಮುಗಿದು ಹೋಗುತ್ತದೆ.

ಶ್ರೀ ಸಿದ್ದರಾಮಯ್ಯ : 10 ನಿಮಿಷದಲ್ಲಿ ಮುಗಿಯುತ್ತದೆ. ಇನ್ನೂ ಪ್ರಶ್ನೋತ್ತರವೇ ಮುಗಿದಿಲ್ಲ. ನಿಯಮ 69 ರಲ್ಲಿ ನಾಲ್ಕು ಇವೆ. ಅವುಗಳನ್ನೆಲ್ಲಾ ಚರ್ಚೆ ಮಾಡಬೇಕೋ ಬೇಡವೋ? ಸರ್ಕಾರ ಅದಕ್ಕೆ ಇವತ್ತು ಉತ್ತರ ಕೊಡಬೇಕೋ ಬೇಡವೋ?

ಶ್ರೀ ಸುರೇಶ್ ಕುಮಾರ್ : Agenda ದಲ್ಲಿ ಇರುವುದು ಹಾಗೆ. Allow us 10 ನಿಮಿಷ.

ಶ್ರೀ ಸಿದ್ದರಾಮಯ್ಯ : No. I am not preventing you. ನೀವು allow ಮಾಡುವುದು ಮಾಡಿಯೇ ಮಾಡುತ್ತೀರಿ. ಅವರಿಗೆ ಕೇಳುತ್ತೇವೆ, ಬೇಡ ಸ್ವಲ್ಪ ಸಮಯ ಕೊಡಿ ಆ ಮೇಲೆ ಮಾಡಿ ಸರ್ಕಾರಕ್ಕೆ ಹೇಳಿ ಎಂದು.

4. ಕರ್ನಾಟಕ ಭೂಕಬಳಿಕೆ (ನಿಷೇಧ ವಿಧೇಯಕ 2011
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ,

2011ನೇ ಸಾಲಿನ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರ ಮುಖಾಂತರ ಪ್ರತಿ ಪಕ್ಷದ ನಾಯಕರಿಗೆ 2007 ರಲ್ಲಿ ಇದೇ ಸದನ ಒಂದು ವಿಧೇಯಕವನ್ನು ಅಂಗೀಕರಿಸಿ ಕರ್ನಾಟಕ ಭೂ ಕಬಳಿಕೆ ವಿಧೇಯಕ (2007)ವನ್ನು ರೂಪಿಸಿ ಮಂಡಿಸಿ ಅಂಗೀಕಾರ ಮಾಡಿ ಮಾನ್ಯ ರಾಷ್ಟ್ರಪತಿ ಯವರಿಗೆ ಕಳುಹಿಸಿ ಕೊಟ್ಟಿದ್ದರು. ಕೇಂದ್ರದಿಂದ ಎರಡು ತಿದ್ದುಪಡಿಗಳನ್ನು ಕಳುಹಿಸಿದ್ದಾರೆ. ನೀವು ಮಾಡಿರುವುದು ಬಹಳ ಸೂಕ್ತವಾಗಿದೆ, ಅದರೆ ವಕ್ಫ್ ಮತ್ತು ಹಿಂದೂ ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳಿಗೆ ಸೇರಿದ ಭೂಮಿ ಏನಿದೆ ಅದರದೂ ಕೂಡ ಭೂ ಕಬಳಿಕೆ ಆಗುತ್ತಿದೆ, ವ್ಯಾಪಕವಾಗಿ ಭೂ ಕಬಳಿಕೆ ಮಾಡಿ ಅದರಲ್ಲಿಯೂ ಕೂಡ ರಿಯಲ್ ಎಸ್ಟೇಟ್ ದಂಧೆ ನಡೆಯುತ್ತಿದೆ. ಅದನ್ನೂ ಕೂಡ ಈ ಭೂ ಕಬಳಿಕೆ ನಿಯಂತ್ರಣದಲ್ಲಿ ತರಬೇಕೆಂದು ಅದನ್ನು ಅಂಗೀಕರಿಸಿ ನಾವು ಇವತ್ತು ತಮ್ಮ ಮುಂದಿಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ಇದರಲ್ಲಿ ತಾವು ಒಂದು amendment ಮಾಡಿ. "land grabber" ಎಂದು ಇದೆಯಲ್ಲ, ಅದರ ಜೊತೆಗೆ "Builder" ಎನ್ನುವ ಒಂದು ಪದವನ್ನು ಸೇರಿಸಿ. ಇದರಲ್ಲಿ "Builder" ಎನ್ನುವ ಪದ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : First a person should grab and then only he coes with the building activities.

ಅಧ್ಯಕ್ಷರು : Building automatic ಆಗಿ ಹೋಗುತ್ತದೆ.

ಶ್ರೀ ಸಿದ್ದರಾಮಯ್ಯ : person ಎನ್ನುವ definition ನಲ್ಲಿ Builder ಸೇರಿಕೊಳ್ಳುವುದಿಲ್ಲ. ಇವತ್ತು ಅವರೇ ಎಲ್ಲಾ ನಾಲಾ ಮುಚ್ಚಿಬಿಟ್ಟು, ಅದೆಲ್ಲ ಹೊಡೆದು ಬಿಟ್ಟಿದ್ದಾರೆ.

ಅಧ್ಯಕ್ಷರು : ಸರಿ. Landಗೆ ಹೋಗದೇ build ಮಾಡುವುದಕ್ಕಾಗುವುದಿಲ್ಲವಲ್ಲ?

ಶ್ರೀ ಸಿದ್ದರಾಮಯ್ಯ : ನೋಡಿ ಇಲ್ಲಿ ಒಂದು ಮಂತ್ರಿ ಮಾಲ್ ಎಂದು ಒಂದು ಮಾಲ್ ಕಟ್ಟಿದ್ದಾರಲ್ಲ, ಅವರು ರಸ್ತೆಯನ್ನು ನುಂಗಿ ಹಕಿಬಿಟ್ಟಿದ್ದಾರೆ. ಹಾಗೆ ಬೇರೆ ಬೇರೆ ಕಡೆ ಎಲ್ಲಾ ಮಾಡುತ್ತಾರೆ. ಅದಕ್ಕೆ ನೀವು "Builder" ಎಂದು ಒಂದು ಪದ ಸೇರಿಸಿ, ನಿಮಗೆ ಅನುಕೂಲವಾಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಪೂರ್ತಿ ಒಪ್ಪಿಕೊಳ್ಳುತ್ತೇನೆ. A builder if he commits such a crime or such thing first of all, he should grab it, he will be considered as a grabber.

ಶ್ರೀ ಸಿದ್ದರಾಮಯ್ಯ : No. A builder as an entity, if it has grabbed ಎಂದು ಇಟ್ಟುಕೊಳ್ಳೋಣ. ಅದಕ್ಕೆ ಏನು ಮಾಡುತ್ತೀರಿ? ಅವರಿಗೆ ಏನು ಶಿಕ್ಷೆ? ಅವರಿಗೆ ಹೇಗೆ ಬರುತ್ತದೆ? ಅದು definition clause ನಲ್ಲಿ ಬರಬೇಕಲ್ಲ?

ಶ್ರೀ ಎಸ್. ಸುರೇಸ್ ಕುಮರ್ : ಈಗ ನಾನು ಆ definition ಓದಿಬಿಡುತ್ತೇನೆ.

ಶ್ರೀ ಸಿದ್ದರಾಮಯ್ಯ : ನಾನು ಆ definition ಓದಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಓದುತ್ತೇನೆ.

> "Land grabber" means a person or a group of persons who commits land grabbing and includes any person who gives financial aid to any person for taking illegal possession of lands or for construction of unauthorized structures thereon, or who collects or attempts to collect from any occupiers of such lands rent, compensation and other charges by criminal infimidation....."

It is included. ಇದು ವ್ಯಾಪಕವಾಗಿ ಇದೆ.

ಶ್ರೀ ಸಿದ್ದರಾಮಯ್ಯ : ಅದನ್ನೆಲ್ಲಾ ನಾನು ಒಪ್ಪಿಕೊಳ್ಳುತ್ತೇನೆ. Builder ಎನ್ನುವ ಪದವನ್ನು ಹಾಕುವುದಕ್ಕೆ ನಿಮಗೆ ತೊಂದರೆ ಆಗುತ್ತದೆಯೇ?

ಶ್ರೀ ಎಸ್. ಸುರೇಶ್ ಕುಮಾರ್ : It is not necessary. It has become redundant. First ಒಬ್ಬ builder ಏನೇ ಮಾಡಬೇಕಾದರೂ

ಕೂಡ he should grab. He comes under that category. ಅದನ್ನು ಯೋಚನೆ ಮಾಡೋಣ.

ಶ್ರೀ ಸಿದ್ದರಾಮಯ್ಯ : A person cannot be a builder. ಆದುದರಿಂದ ಅದು ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ. "A person or a group of persons or builder", ಎಂದು ಮಾಡಿ. ನಿಮಗೆ ತೊಂದರೆ ಏನಾಗುತ್ತದೆ? Builder ಎಂದರೆ ಒಂದು ಕಂಪನಿ, ಅವರೇ ಹೊಡೆಯುವುದು. They are influencial persons. ಅವರು ಹೊಡೆದು ಹಾಕಿ ಬಿಡುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ಅದಕ್ಕಾಗಿಯೇ ನಾವು "illegal possession of lands or construction" ಎಂದು ಸೇರಿಸಿರುವುದು.

ಶ್ರೀ ಸಿದ್ದರಾಮಯ್ಯ : It is my suggestion.

ಶ್ರೀ ಎಸ್. ಸುರೇಶ್ ಕುಮಾರ್ : We will consider it.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಭೂ ಕಬಳಿಕೆ ಎನ್ನುವುದು ಒಂದು art ಆಗಿಬಿಟ್ಟಿದೆ.

ಶ್ರೀ ಎಸ್. ಸುರೇಶ್ ಕುಮಾರ್ : That is an art of living for many.

ಶ್ರೀ ಟಿ.ಬಿ. ಜಯಚಂದ್ರ : ಆ ದಂಧೆ ನಾವು ಮಾಡಲಿಲ್ಲ. ಆದ್ದರಿಂದ ತತ್ತರಿಸಿ ಹೋಗತಕ್ಕಂಥವರು ನಾವು. ಇದು ಏನಾಗಿದೆ ಎಂದರೆ ಯಾವ್ಯಾವುದೋ ಸೊಸೈಟಿಗಳನ್ನು ಮಾಡಿಕೊಂಡಿದ್ದಾರೆ. ಬಹಳಷ್ಟು ಸೊಸೈಟಿಗಳು ಇವೆ. ಬಹಳ ಹಿಂದೆ register ಆಗಿರುವಂತಹ ಹಳೆ ಸೊಸೈಟಿಗಳನ್ನು ಕೋಟ್ಯಂತರ ರೂಪಾಯಿ ಕೊಟ್ಟು purchase ಮಾಡುತ್ತಿದ್ದಾರೆ. ಏಕೆಂದರೆ ಹಿಂದೆ register ಆಗಿರುವಂತಹ society ಗಳಿಗೆ exemptions ಇರುತ್ತವೆ. ಆ ಸೊಸೈಟಿಗಳ ಹೆಸರಿನಲ್ಲಿ land grab ಅನ್ನು ಯಾರು ಮಾಡಿಲ್ಲ? ಎಲ್ಲರೂ ಮಾಡುತ್ತಿರುವುದು ಕಳ್ಳದಂಧೆ. ಅತ್ಯಂತ ಪ್ರಭಾವಿಗಳೆಲ್ಲರೂ ಕೂಡ involve ಆಗಿದ್ದಾರೆ. ನೀವು ಅದನ್ನು ಯಾವರೀತಿಯಾಗಿ probe ಮಾಡುತ್ತೀರಿ? ಈಗ ನೀವು ಒಂದು ಮಸೂದೆ ತಂದಿದ್ದೀರಿ. ಅದರಲ್ಲಿ land grabbers ಗೆ ಏನೋ ಮಾಡುತ್ತೇವೆಂದು definition ಎಲ್ಲಾನೂ ಮಾಡಿದ್ದೀರಿ. ಆದರೆ ಸೊಸೈಟಿ ಒಳಗಡೆ ಇರುತ್ತಾರಲ್ಲ ಕಳ್ಳರು, ಅವರನ್ನೇನು ಮಾಡುತ್ತೀರಿ? ಒಂದೊಂದು ಸೊಸೈಟಿಯಲ್ಲಿ ನೂರು ಎಕರೆ ಇರುತ್ತದೆ ಎಂದರೆ, 10 ಎಕರೆ, 20 ಎಕರೆ, 30 ಎಕರೆ ಒಬ್ಬರದೇ control ಇರುತ್ತದೆ. ನಾಮಕಾವಸ್ಥೆಗೆ ಬೇರೆ ಯಾರದೋ ಹೆಸರು ಇರುತ್ತದೆ. ಆದರೆ ಅಲ್ಲಿ ಯಾವುದೋ ಬ್ಲ್ಯಾಕ್ ಮನಿ

ಹಾಕಿಕೊಂಡು ತೆಗೆದುಕೊಂಡಿರುತ್ತಾರೆ. ಆಗ ಆ ಸೊಸೈಟಿ ಹಣೆಬರಹ ಏನು ಎಂದು ಬಿಚ್ಚಿ ಇಡಬೇಕಾಗುತ್ತದೆ. ನೂರಾರು ಸೊಸೈಟಿಗಳು ಇವೆ. ಇದರ ಹಿಂದೆ ನೂರಾರು ಥರವಾದಂತಹ ಪ್ರಭಾವಿಗಳು ಇದ್ದಾರೆ. ಇದರಲ್ಲಿ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಪಟ್ಟಾಭದ್ರ ಹಿತಾಸಕ್ತಿ ಇರತಕ್ಕಂಥ ಜನಗಳು ಕೂಡ ಇದ್ದಾರೆ. ಅವರ ಮೇಲೆ ಕಣ್ಣಿಡಲಿ. ಅದು ಮುಖ್ಯವಾಗಿ ರುವುದು. ಆದರೆ ಯಾರೋ ಒಬ್ಬ ಮನೆ ಕಟ್ಟಿಕೊಳ್ಳುವುದಕ್ಕೆ ಒಂದು ಸೈಟ್ ಇರುತ್ತದೆ, ಅದರ ಜೊತೆಗೆ ಇನ್ನೊಂದು ಸೈಟ್ ತೆಗೆದುಕೊಂಡರೆ ದೊಡ್ಡ

issue ಆಗಬೇಕಾದರೆ, ಸಾವಿರಾರು ಕೋಟಿ ರೂಪಾಯಿ worth property ಇಟ್ಟುಕೊಂಡು ಕೊಟ್ಟಿರುತ್ತಾರಲ್ಲ, ಅವರ ಬಗ್ಗೆ ಏನು ಮಾಡುತ್ತೀರಿ? ಸೊಸೈಟಿ ಎಂದಮೇಲೆ ಮುಗಿದು ಹೋಯಿತು. ನಾನು ಮಾತನ್ನು ಹೇಳುತ್ತೇನೆ, ಸೊಸೈಟಿಯಲ್ಲಿ ಯಾರಾದರೊಬ್ಬರು ಒಂದು land grab ಮಾಡಿ ಇಟ್ಟುಕೊಂಡಿದ್ದಾರೆಂದರೆ ಅದನ್ನು probe ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಮೊದಲು co-operation Department, ಕಂದಾಯ ಇಲಾಖೆ ಇದೆಯಲ್ಲ, ಅವರೇ main culprits. ಅವರೇ ಎಲ್ಲಾ ಹೇಳಿಕೊಡುವವರು. ಯಾವಾಗ ಏನೆನು ಕಾನೂನುಗಳು ಬರುತ್ತದೆ, ಯಾವಾಗ ಕಾನೂನುಗಳು ಬದಲಾಗುತ್ತವೆ ಗೊತ್ತಿಲ್ಲ. ಅದರಿಂದೆಲ್ಲ ಅವರಿಗೆ ರಕ್ಷಣೆ ಆದರೆ land registration ಆಗುತ್ತದೆ. ಅವರ land ಗಳನ್ನು ಏಕೆ resume ಮಾಡುವುದಲ್ಲ? ಕಂದಾಯ ಇಲಾಖೆಗೆ ತಾಕೀತು ಮಾಡಿ. ಅವರು ಅದನ್ನು ಏಕೆ ಇಟ್ಟುಕೊಂಡಿದ್ದಾರೆ? You resume that land. Resume ಮಾಡಿದರೆ ಭಯ ಬರುತ್ತದೆ. ಇವತ್ತು ಈ bogus society ಗಳಲ್ಲಿ land grabber ಗಳ ಜಮೀನುಗಳನ್ನು ವಾಪಸ್ಸು ತೆಗೆದುಕೊಂಡಿರುವಂತಹ ಒಂದು ನಿದರ್ಶನ ಕರ್ನಾಟಕದಲ್ಲಿ ಇಲ್ಲ ಎನ್ನುವುದಾದರೆ ಏಕೆ ಈ ಕಾನೂನುಗಳು ಬೇಕು? ನೀವು monitor ಮಾಡುವುದಿಲ್ಲ. ನೀವು action ತೆಗೆದುಕೊಳ್ಳದಿದ್ದರೆ ಏನಾಗುತ್ತದೆ? ಅದಕ್ಕಿಂತ ಹೆಚ್ಚಾಗಿ land grabbers ಗೆ ಸಹಕಾರಿಯಾಗುವಂತಹ ಇಲಾಖೆಗಳು ಆಗಿ ಹೋಗಿಬಿಟ್ಟಿವೆ. ದಯಮಾಡಿ ಇದರ ಬಗ್ಗೆ ಸ್ವಲ್ಪ ಗಮನ ಕೊಡಿ. ಕಂದಾಯ ಇಲಾಖೆಯಲ್ಲಿ ಇದನ್ನು ತಾಕೀತು ಮಾಡುವಂತಹ ಕೆಲಸವನ್ನು ಮಾಡಬೇಕು. ಅದೇ ರೀತಿ Co-operation Department ಬಗ್ಗೆ ಹೇಳುವುದೇ ಬೇಡ. ಕಳ್ಳದಂಧೆ ಮಾಡುವುದಕ್ಕೋಸ್ಕರ ಕಾನೂನು ಇಟ್ಟಿದ್ದೇವೆನ್ನುವ ಭಾವನೆ ಬರುತ್ತದೆ. ದಯಮಾಡಿ ಇದಕ್ಕೆ ನೀವು

ಸ್ವಲ್ಪ control ಇಡದಿದ್ದರೆ ಆಗುವುದಿಲ್ಲ. ಈ ಸೊಸೈಟಿಯಲ್ಲಿರುವಂತಹ land grabbers ಇತಿಹಾಸವನ್ನು, ಅವರನ್ನು watch ಮಾಡುವಂಥದ್ದನ್ನು, land resume ಮಾಡತಕ್ಕಂಥ ಕೆಲಸವನ್ನು ಮಾಡಿದರೆ ಬಹುಶಃ ಒಳ್ಳೆಯ ಹೆಸರು ಬರುತ್ತದೆ. ನೀವು ಏನೋ ಮಾಡಿ ಕಂದಾಯ ಇಲಾಖೆ ಒಂದು ತಿರ್ಮಾನ ಮಾಡುತ್ತಿದ್ದ ಹಾಗೆ, ಕೋರ್ಟಿನಿಂದ stay ಬಂದು ಬಿಡುತ್ತದೆ. Series of court cases ಹಾಕಿಬಿಡುತ್ತಾರೆ. ಯಾರು ಏನಾದರೂ ಮಾಡಿಕೊಳ್ಳಲಿ, ಮಾಡುತ್ತಾರೆ, ಏನೂ ಗೊತ್ತಾಗದ ಹಾಗೆ ಆಗಿಬಿಡುತ್ತದೆ. ಹಾಗಾಗಿ ಬೆಂಗಳೂರು land grabber's paradise ಆಗಿಹೋಗಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಏನೆಂದರೆ ಇದು ಕಷ್ಟ ಆಗುವುದಿಲ್ಲ, definition ನಲ್ಲಿ societies, land developers, grabbers ಎಂದು ಸೇರಿಸಿದರೆ ಏನೂ ತೊಂದರೆಯಾಗುವುದಿಲ್ಲ. ನೀವು definition ನಲ್ಲಿ ಸೇರಿಸಿಬಿಡಿ. ಏಕೆಂದರೆ ನೀವು ಇಲ್ಲಿ unauthorized building ಎಂದು ಹೇಳುತ್ತೀರಿ. ಇವತ್ತು ಈ ಕಿಲಾಡಿಗಳು licence ತೆಗೆದುಕೊಂಡು ಕಟ್ಟುತ್ತಾರೆ. Grabbed land ಮೇಲೆ license ತೆಗೆದುಕೊಂಡು ಕಟ್ಟುತ್ತಾರಲ್ಲ, ಅದು unauthorized structure ಅಲ್ಲ, legal structure. ಲೂಟಿ ಹೊಡೆದದ್ದು.

ಅಧ್ಯಕ್ಷರು : But trespass ಆಗಿದ್ದರೆ even licence ಇದ್ದರೂ ಕೂಡ ಹೋಗುತ್ತದೆ.

ಶ್ರೀ ಸಿದ್ದರಾಮಯ್ಯ : Licence ಅನ್ನು ದುಡ್ಡು ಕೊಟ್ಟು ತೆಗೆದುಕೊಂಡು ಬಿಡುತ್ತಾರೆ. ಈಗ ಮಂತ್ರಿಮಾಲ್‌ನವರು licence ತೆಗೆದು ಕೊಂಡಿದ್ದಾರೆ. Originally grabbing is there. ಆದರೆ ಅವರು ಏನು ಹೇಳುತ್ತಾರೆ, unauthorized construction ಎಂದು ಇದರಲ್ಲಿ ಇವರು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ನೀವು ಲಾಯರ್, ನೀವು ಇನ್ನೊಂದು ಬಾರಿ Definition clause ಅನ್ನು ಓದಿ. ನನಗಿಂತ ಚೆನ್ನಾಗಿ ನಿಮಗೆ law ಅರ್ಥವಾಗುತ್ತದೆ ಎಂದು ಅನಿಸುತ್ತದೆ.

ಅಧ್ಯಕ್ಷರು : ಹಾಗೇನಿಲ್ಲ. 2(f) ನಲ್ಲಿ ಬಹಳ clear ಆಗಿ ಇದೆ.

ಶ್ರೀ ಎಸ್. ಸುರೇಶ್ ಕುಮಾರ್ : ಈ ರೀತಿ ಒಂದು ಸಣ್ಣ amendment ಮಾಡಿದರೆ ಆಗುತ್ತದೆ.

> "Land grabber" means a person or a group of persons who commits land grabbing and

includes any person who gives financial aid to ant person for taking illegal possession of lands or for construction of structures thereon...."

"Unauthorised" ತೆಗೆದುಬಿಟ್ಟು structures thereon ಅಂದರೆ,

Any person who constructs, who builds on such land

which has been grabbed illegal means ಆಗುತ್ತೆ.

ಶ್ರೀ ಸಿದ್ದರಾಮಯ್ಯ : Through societies ಎನ್ನುವುದನ್ನು ಸೇರಿಸಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : O.K.

ಶ್ರೀ ಆರ್. ರೋಷನ್ ಬೇಗ್ : 25 ವರ್ಷಕಿಂತ ಮೊದಲು grab ಮಾಡಿದ್ದರೆ ಅದಕ್ಕೆ ಏನು ಮಾಡುತ್ತೀರಿ? ಹೊಸದಾಗಿ grab ಮಾಡಿರುವುದಿಲ್ಲ, 25 ವರ್ಷಕ್ಕಿಂತ ಮೊದಲು grab ಮಾಡಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗಾಗಲೇ ಅದಕ್ಕೆ Act ನಲ್ಲಿ ಇದೆ. There are institutions who should do it. ಆ institutions ಮುಖಾಂತರ ನಾವು ಮಾಡಿಸಬೇಕು.

ಶ್ರೀ ಸಿದ್ದರಾಮಯ್ಯ : ಇದನ್ನು ಮಾಡುವಾಗಲೇ ಸರಿಯಾಗಿ ಇರಲಿ, ಅವರು ತಪ್ಪಿಸಿಕೊಳ್ಳುವುದಕ್ಕೆ ದಾರಿ ಇರಬಾರದು ಎಂದು ಹೇಳುತ್ತಿದ್ದೇವೆ.

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿನಗರ) : ಮಾನ್ಯ ಅಧ್ಯಕ್ಷರೇ, HMT management ನವರು permission ಇಲ್ಲದೆಯೇ 641 ಎಕರೆ Government land ಒಳಗೆ ಸುಮಾರು 150 ಎಕರೆಯನ್ನು ಮಾರಾಟ ಆಡುತ್ತಿದ್ದಾರೆ ಈ ವಿಚಾರ ಹೋದ ವಾರ ದೊಡ್ಡ ಪತ್ರಿಕೆಯೊಳಗೆ ಪ್ರಕಟಣೆಯಾಗಿದೆ.

ಶ್ರೀ ಆರ್. ರೋಷನ್ ಬೇಗ್ : ಶ್ರೀನಿವಾಸ್ ರವರು ಹೇಳುತ್ತಿರುವುದು correct.

ಶ್ರೀ ಎಂ. ಶ್ರೀನಿವಾಸ್ : ಆಡಳಿತ ಪಕ್ಷದವರು ಸೇರಿಕೊಂಡು ಸರ್ಕಾರಕ್ಕೆ ವಾಪಸ್ಸು ಕೊಡುವಂಥ ಜಮೀನನ್ನು permission ಇಲ್ಲದೇನೇ ಮಾರುತ್ತಿದ್ದಾರೆ.

ಶ್ರೀ ಆರ್. ರೋಷನ್ ಬೇಗ್ : ಶ್ರೀನಿವಾಸ್ ರವರು ಹೇಳುತ್ತಿರುವುದನ್ನು ನಾನು ಪೂರ್ತಿ ಒಪ್ಪುತ್ತೇನೆ.

ಶ್ರೀ ಎಂ. ಶ್ರೀನಿವಾಸ್ : Government land agreement ಆಗಿರುವುದು ಏನೆಂದರೆ ಸುಮಾರು 60 ವರ್ಷದ ಹಿಂದೆ HMT ಕಂಪನಿಯವರಿಗೆ ಕೊಟ್ಟಿರುವಂಥ ಜಮೀನನ್ನು ಅವರು use ಮಾಡಿಕೊಳ್ಳದಿದ್ದರೆ, ವಾಪಸ್ಸು ಸರ್ಕಾರದ Revenue ಇಲಾಖೆಗೆ ಕೊಡಬೇಕೆಂದು. ಆದರೆ ಹಾಗೆ ಕೊಡಲಿಲ್ಲ. ಸರ್ಕಾರದ Permission ಇಲ್ಲ, Central Government Permission ಇಲ್ಲ, State Government permission ಇಲ್ಲ. ಆದರೂ ಸಹ ನೂರಾರು ಎಕರೆ ಜಮೀನನ್ನು builders ಗೆ ಮಾರಾಟ ಮಾಡುತ್ತಿದ್ದಾರೆ. ಆದರೆ ಆ employees ಗೆ ಇವರು ಒಂದು ಸೈಟ್ ಕೊಟ್ಟಿಲ್ಲ, ಆ employees ಗೆ ಒಂದು ಮನೆ ಕಟ್ಟಿ ಕೊಟ್ಟಿಲ್ಲ. ಆದರೆ management ಎಲ್ಲಾ ಸೇರಿ ನೂರಾರು ಎಕರೆ ಸುಮಾರು 500 ಕೋಟಿ ರೂಪಾಯಿ land ನ್ನು ಇವತ್ತಿನದಿವಸ ಮಾರಾಟ ಮಾಡುತ್ತಿದ್ದಾರೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೆ, National Textiles Corporation ಜಾಗವೆಂದು ಹೇಳಿ builders, ರಾಜಕಾರಣಿಗಳೆಲ್ಲಾ ಸೇರಿಕೊಂಡು ಹೊಡೆದುಕೊಂಡಿಲ್ಲವೇನು?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ,

> "(e) Land grabber" means a person or a group of persons, societies, or developers or builders who commit alnd grabbing and includes any person who gives financial aid.. .." ಮುಂದಿನದು continue ಆಗುವುದು.

ಶ್ರೀ ಆರ್. ರೋಷನ್ ಬೇಗ್ : ಮುಂಚೆ commit ಮಾಡಿದ್ದರೆ?

ಶ್ರೀ ಸಿದ್ದರಾಮಯ್ಯ : "Committed or commits" ಎಂದು ಮಾಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಆಯಿತು. ಅಷ್ಟು ಮಾಡುತ್ತೇನೆ.

ಅಧ್ಯಕ್ಷರು : ನೀವು ಹೇಳಿದ್ದೇ, ತಿದ್ದುಪಡಿ ಎಂದು ಹೇಳುತ್ತೇನೆ, Amendment ನ್ನು ನಾನು ಓದುತ್ತೇನೆ.

ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2011 ನೇ ಸಲಿನ ಕರ್ನಾಟಕ ಭೂಕಬಳಿಕೆ ನಿಷೇಧ ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು
ಸೂಚಿಸಬೇಕು,

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು ಅನುಮೋದನೆ ದೊರಕಿದೆ.

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ತಿದ್ದುಪಡಿಯನ್ನು ಮಂಡಿಸಿ.

ಖಂಡ 2 :

ಶ್ರೀ ಎಸ್. ಸುರೇಶ್ ಕುಮಾರ್ : (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ) : ಮಾನ್ಯ ಸಭಾಧ್ಯಕ್ಷರೆ, 201 ನೇ ಸಾಲಿನ ಕರ್ನಾಟಕ ಭೂಕಬಳಿಕೆ ನಿಷೇಧ ವಿಧೇಯಕದ ಖಂಡ 2 ಉಪಖಂಡ(ಇ)ಗೆ ನಾನು ಈ ಕೆಂಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

(e) "land grabber" means a person or a group of persons, society, builder, land developer who commits or has committed land grabbing and includes any person who gives financial aid to any

person for taking illegal possession of lands or for construction of structures thereon, or who collects or attempts to collect from any occupiers of such lands rent, compensation and other charges by criminal intimidation, or who abets the doing of any of the above mentioned acts; and also includes the successors in interest;

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಟಿ.ಬಿ. ಜಯಚಂದ್ರ : ಸೊಸೈಟಿ ಬರಲಿ.

ಶ್ರೀ ಎಸ್. ಸುರೇಶ್ ಕುಮಾರ್ : ಸೊಸೈಟಿ ಸೇರಿಸಿದ್ದೇವಲ್ಲ? ಮತ್ತೊಮ್ಮೆ ಓದುತ್ತೇನೆ. "Land grabber"meas a person or a group of persons, society, builder, land developer, who commits or has committed land grabbing..." ಅದರಿಂದ ಮುಂದೆ continue ಆಗುತ್ತೆ. ಒಪ್ಪಿಗೆನಾ?

ಶ್ರೀ ಟಿ.ಬಿ. ಜಯಚಂದ್ರ : Housing society ಎಂದು ಬರಲಿ.

ಶ್ರೀ ಎಸ್. ಸುರೇಶ್ ಕುಮಾರ್ : Society ಸಾಕು. Housing Society is a society.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

(e) "land grabber" means a person or a group of persons, society, builder, land developer who commits or has committed land grabbing and includes any person who gives financial aid to any person for taking illegal possession of lands or for construction of structures thereon, or who collects or attempts to collect from any occupiers of such lands rent, compensation and other charges by criminal intimidation, or who abets the doing of

any of the above mentioned acts; and also includes the successors in interest;

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು
ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು

ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

"ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು
ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿದೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 3 ರಿಂದ 21

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

ಖಂಡ 3 ರಿಂದ 21ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ
3 ರಿಂದ 21 ರವರೆಗಿನ ಖಂಡಗಳು ವಿಧೇಯಕದ ಅಂಗವಾದವು.

ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು : ಮೊದನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ.

ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬಹುದು.

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಸುರೇಶ್ ಕುಮಾರ್ : (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಂಡಳಿ ಸಚಿವರು) (ಮುಖ್ಯ ಮಂತ್ರಿಯವರ ಪರವಾಗಿ): ಮಾನ್ಯ ಸಭಾಧ್ಯಕ್ಷರೆ, 2011 ನೇ ಸಾಲಿನ ಕರ್ನಾಟಕ ಭೂಕಬಳಿಕೆ ನಿಷೇಧ ವಿಧೇಯಕವನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸಬೇಕೆಂದು

ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.
ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

2011 ನೇ ಸಾಲಿನ ಕರ್ನಾಟಕ ಭೂಕಬಳಿಕೆ ನಿಷೇಧ ವಿಧೇಯಕವನ್ನು ತಿದ್ದುಪಡಿಯೊಂದಿಗೆ ಈ ಸಭೆಯು ಅಂಗೀಕರಿಸಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತುವಿಧೇಯಕಕ್ಕೆ ತಿದ್ದುಪಡಿಯೊಂದಿಗೆ ಅನುಮೋದನೆ ದೊರಕಿದೆ.

5. ಕರ್ನಾಟಕ ಪಟ್ಟಣ ಮತ್ತು ಗ್ರಾಮಂತರ ಯೋಜನೆ (ತಿದ್ದುಪಡಿ) ವಿಧೇಯಕ, 2011
ಪರ್ಯಾಪೋಚನಾ ಪ್ರಸ್ತಾವ